ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಬುಧವಾರ, ದಿನಾಂಕ : 18 ನೇ ಮಾರ್ಚ್, 2020

ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಬಗ್ಗೆ

ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-

1129 (1352) ಮಾನ್ಯ ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ, ಮೀನುಗಾರಿಕಾ ಅಭಿವೃದ್ಧಿ ನಿಗಮವು 2019-20ರಲ್ಲಿ ಗಳಿಸಿದ ಲಾಭವೆಷ್ಟು ; (ವಿವರ ನೀಡುವುದು)

(ಆ) ಕೆ.ಎಫ್.ಡಿ.ಸಿ. ಯಿಂದ ನಡೆಸಲ್ಪಡುವ ಮೀನು ಊಟದ ಹೋಟೆಲ್ ಬೆಂಗಳೂರು ಶಾಖೆಯು ಲಾಭದಲ್ಲಿದೆಯೇ ; ದಿನವೊಂದಕ್ಕೆ ನಡೆಸುವ ವ್ಯವಹಾರ ಎಷ್ಟು ; ಇಂತಹ ಹೋಟೆಲ್‌ಗಳನ್ನು ರಾಜ್ಯದ ಎಷ್ಟು ಕಡೆಗಳಲ್ಲಿ ಪ್ರಾರಂಭಿಸಲು ಸರ್ಕಾರದ ಮುಂದೆ ಯೋಜನೆಗಳಿವೆ ; (ವಿವರ ನೀಡುವುದು)

(ಇ) ಹಸಿ ಮೀನು ಮಾರಾಟ ಮಳಿಗೆಗಳು ಲಾಭದಲ್ಲಿವೆಯೇ ; ವಾರ್ಷಿಕವಾಗಿ, ಎಷ್ಟು ಲಾಭಗಳಿಸುತ್ತದೆ ; (ವಿವರ ನೀಡುವುದು)

(ಈ) ಕೆ.ಎಫ್.ಡಿ.ಸಿ. ಯಲ್ಲಿ ಪ್ರಸ್ತುತ ಎಷ್ಟು ನೌಕರರು ಕೆಲಸ ನಿರ್ವಹಿಸುತ್ತಿದ್ದಾರೆ ; ಖಾಯಂ, ದಿನಗೂಲಿ ಮತ್ತು ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು? (ವಿವರ ನೀಡುವುದು)